ದಿನಾಂಕಃ **14.10.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಮಾನ್ಯ ಶ್ರೀ **MN** ವಕೀಲರಿಂದಃ

ದಾವಾ ಸರ್ವೆ ನಂಬರ್ ಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಮ್ಮ ತಾತ ಚಿಕ್ಕ ಕರಿಯಪ್ಪ ರವರ ಸ್ವಯಾರ್ಜಿತ ಆಸ್ತಿ ಆಗಿದ್ದು, ಅದು ನನ್ನ ತಾಯಿ ಮತ್ತು ಚಿಕಪ್ಪನಿಗೆ ಬಂದಿರುತ್ತದೆ. ನರಸಪ್ಪ ರವರಿಗೆ **3** ಜನ ಮಕ್ಕಳು ಅವರ ಹೆಸರು ಚಿಕ್ಕ ಕರಿಯಪ್ಪ, ನರಸಿಂಹಪ್ಪ ಮತ್ತು ದೊಡ್ಡಯ್ಯ. ಚಿಕ್ಕ ಕರಿಯಪ್ಪನಿಗೆ ಹನುಮಂತರಯಪ್ಪ, ದೊಡ್ಡಯ್ಯ, ಕರಿಯಮ್ಮ ಹಾಗೂ ಹನುಮಕ್ಕ ಎಂಬ ಮಕ್ಕಳು. ನರಸಿಂಹಪ್ಪ ರವರಿಗೆ ಹನುಮಂತರಾಯಪ್ಪ, ಜಯಮ್ಮ ಮತ್ತು ಕರಿಯಮ್ಮ ಎಂಬ ಮಕ್ಕಳು. ದೊಡ್ಡಯ್ಯನಿಗೆ ನಾಗಲಕ್ಷ್ಮಿ ಮತ್ತು ಅಶೋಕ್ ಎಂಬ ಇಬ್ಬರು ಮಕ್ಕಳು.

ಸರ್ವೆ ನಂ. **61** ಮತ್ತು **62** ನರಸಪ್ಪ ರವರಿಂದ ಅವರ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.**102** ಮತ್ತು **108** ನರಸಪ್ಪ ರವರಿಂದ ಅವರ ಮಕ್ಕಳಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. **61** ರಲ್ಲಿ **14** ಎಕರೆ **34** ಗುಂಟೆ ಇರುತ್ತದೆ. ಸರ್ವೆ ನಂ. **62** ರಲ್ಲಿ **22** ಎಕರೆ ಇರುತ್ತದೆ. ಸರ್ವೆ ನಂ. **109/3** ರಲ್ಲಿ **8** ಎಕರೆ **29** ಗುಂಟೆ ಇರುತ್ತದೆ. ಸದರಿ ಸರ್ವೆ ನಂ. **109/3** ನ್ನು **08.06.1986** ರಂದು ನನ್ನ ತಂದೆ ನನ್ನ ತಾತನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸರ್ವೆ ನಂ. **85** ದೊಡ್ಡಯ್ಯ ರವರಿಗೆ **1962** ರಲ್ಲಿ ಮಾಡಿಕೊಂಡ ವಿಭಾಗದಂತೆ ಹೋಗಿರುತ್ತದೆ. ಮೂಲತಃ ಯಾರಿಗೆ ಸೇರಿತ್ತು ಎಂದು ನನಗೆ ಗೊತ್ತಿಲ್ಲ. ಚಿಕ್ಕ ಕರಿಯಪ್ಪ, ನರಸಿಂಹಪ್ಪ ಮತ್ತು ದೊಡ್ಡಯ್ಯ ಸರ್ವೆ ನಂ. **85** ನ್ನು ಜಂಟಿಯಾಗಿ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. **1962** ರಲ್ಲಿ ಚಿಕ್ಕ ಕರಿಯಪ್ಪ, ನರಸಿಂಹಪ್ಪ ಮತ್ತು ದೊಡ್ಡಯ್ಯ ವಿಭಾಗ ಮಾಡಿಕೊಡಿಂರುತ್ತಾರೆ. ಸರ್ವೆ ನಂ. **61** ಮತ್ತು **62** ಚಿಕ್ಕ ಕರಿಯಪ್ಪ, ನರಸಿಂಹಪ್ಪ ರವರಿಗೆ ತಲಾ ಅರ್ಧ ಭಾಗ ಬಂದಿರುತ್ತದೆ.

ವಿಭಾಗ ಪತ್ರದಲ್ಲಿ ಸದರಿ ಸರ್ವೆ ನಂಬರ್ ಗಳಲ್ಲಿ ಯಾರ ಭಾಗ ಎಲ್ಲಿ ಬರುತ್ತದೆ ಎಂದು ತೋರಿಸಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ದೊಡ್ಡಯ್ಯ ರವರಿಗೆ ಸದರಿ ವಿಭಾಗದಲ್ಲಿ ಸರ್ವೆ ನಂ. **85, 111, 113, 3/3** ಬಂದಿರುತ್ತದೆ. ಸರ್ವೆ ನಂ. **85** ರಲ್ಲಿ **3** ಎಕರೆ **4** ಗುಂಟೆ ಇರುತ್ತದೆ. ಸರ್ವೆ ನಂ. **111** ರಲ್ಲಿ **26** ಎಕರೆ **5** ಗುಂಟೆ ಇರುತ್ತದೆ. ಸರ್ವೆ ನಂ. **113** ರಲ್ಲಿ **23** ಎಕರೆ **2** ಗುಂಟೆ ಇರುತ್ತದೆ. ದೊಡ್ಡಯ್ಯ ರವರಿಗೆ ಸದರಿ ಸರ್ವೆ ನಂಬರ್ ಗಲ್ಲಿ ಇರುವ ಅಷ್ಟು ಜಮೀನುಗಳನ್ನು ಬಿಟ್ಟುರುತ್ತಾರೆ.

ಸರ್ವೆ ನಂಬರ್ **62** ರಲ್ಲಿ ಯಾವ ಭಾಗ ಯಾರಿಗೆ ಹೋಗಬೇಕು ಎಂದು ನಿಡಿ-**31** ವಿಭಾಗ ಪತ್ರದಲ್ಲಿ ನಮೂದಾಗಿಲ್ಲ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. **111** ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. **3/3** ನ್ನು ಚಿಕ್ಕ ಕರಿಯಪ್ಪ, ನರಸಿಂಹಪ್ಪ ಮತ್ತು ದೊಡ್ಡಯ್ಯ ಮೂವರು ಸೇರಿ ಮಾರಾಟ ಮಾಡಿರುತ್ತಾರೆ ಯಾರಿಗೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. **113** ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಚಿಕ್ಕ ಕರಿಯಪ್ಪ, ನರಸಿಂಹಪ್ಪ ಮತ್ತು ದೊಡ್ಡಯ್ಯ ರವರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. **1962** ರಲ್ಲಿ ಯಾರಿಗೆ ಎಲ್ಲಿ ಜಮೀನು ಬರುತ್ತದೆ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ-**31** ರ ಪ್ರಕಾರ ನರಸಿಂಹಪ್ಪ, ಚಿಕ್ಕ ಕರಿಯಪ್ಪ ರವರಿಗೆ ಬಂದ ಜಮೀನುಗಳ ಚೆಕ್ಕು ಬಂದಿ ಹೇಳಲು ನನಗೆ ಗೊತ್ತಿಲ್ಲ. ವಿಭಾಗ ಪತ್ರದಂತೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. **1962** ನೇ ವಿಭಾಗ ಪತ್ರದಂತೆ ಯಾರು ಸಹ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಂದಾಜು **19** ಎಕರೆ ನನ್ನ ತಾತ ಚಿಕ್ಕ ಕರಿಯಪ್ಪರವರಿಗೆ ವಿಭಾಗದಲ್ಲಿ

ಬಂದಿರುತ್ತದೆ. ನರಸಿಂಹಪ್ಪ ರವರಿಗೂ ಅಷ್ಟೇ ಜಮೀನು ಬಂದಿರುತ್ತದೆ. ದೊಡ್ಡಯ್ಯ ರವರಿಗೆ ಸುಮಾರು **26** ಎಕರೆ ಜಮೀನು ಬಂದಿರುತ್ತದೆ. ಸರ್ವೆ ನಂ. **113** ನಮ್ಮ ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಡಿ-**31** ರಲ್ಲಿ ಸರ್ವೆ ನಂ. **62, 111** ರಲ್ಲಿ ¼ ನೇ ಭಾಗ ಎಂದು ಬರೆದಿರುತ್ತಾರೆ, ಆದರೆ ನಂತರ ಸಮಪಾಲು ಎಂದು ಸರಿಯಾಗಿ ಬರೆದಿರುತ್ತಾರೆ. ನಾವು ಮಾಡಿಕೊಂಡ ವಿಭಾಗದಂತೆ ಜಮೀನಿನ ಪಹಣಿ ಬಂದಿರುತ್ತದೆ. ನನ್ನ ತಾತ ಚಿಕ್ಕ ಕರಿಯಪ್ಪ ಎಲ್ಲರಿಗೂ ದೊಡ್ಡವರು ಎಂದರೆ ಸರಿ, ಅವರು ಕುಟುಂಬದ ವ್ಯವಹಾರ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ